ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಿಗ್ಗಾಂವ.

ಅಪರಾಧ ಮೊಕದ್ದಮೆ ಸಂಖ್ಯೆ: **1/2024**

ಫಿರ್ಯಾಧಿದಾರಃ ಶ್ರೀಮತಿ ರೇಣುಕಾ ಕೋಂ ಹನುಮಂತಪ್ಪ ಕಬ್ಬೇರ,
ವಯಾಃ 41 ವರ್ಷ, ಉಃ ಗ್ರೂಫ್ ಡಿ ಸರಕಾರಿ ಕೆಲಸ,
ಸಾಃ ಹನುಮರಹಳ್ಳಿ, ತಾಃ ಶಿಗ್ಗಾಂವ, ಜಿಃ ಹಾವೇರಿ

- - ವಿರುದ್ಧ - -

ಆರೋಪಿ ಮಂಜುನಾಥ ತಂದೆ ದುರಗಪ್ಪ ಬಂಡಿವಡ್ಡರ,
ವಯಾಃ 35 ವರ್ಷ, ಉಃ ವ್ಯಾಪಾರ
ಸಾಃ ಕಾಮನಹಳ್ಳಿ, ತಾಃ ಶಿಗ್ಗಾಂವ, ಜಿಃ ಹಾವೇರಿ

ಆ ರೋ ಪ ಣೆ

ದೂರುದಾರರು ಆರೋಪಿತನಾದ ನಿನ್ನ ಮೇಲೆ ಹೊರಿಸಿರುವ ಆಪಾದನೆ ಏನೆಂದರೆ ಆರೋಪಿತನಾದ ನೀನು ದಿನಾಂಕ **10.07.2022** ರಂದು ದೂರುದಾರರ ಕಡೆಯಿಂದ ರೂ.**7,82,000/-** ಗಳನ್ನು ಕೈಗಡ ಸಾಲ ಪಡೆದುಕೊಂಡಿದ್ದು, ಈ ಹಣವನ್ನು 6 ತಿಂಗಳಗೊಳಗಾಗಿ ಮರಳಿ ನೀಡುತ್ತೇನೆಂದು ಪ್ರಮಾಣ ಮಾಡಿದ್ದು, 6 ತಿಂಗಳುಗಳ ನಂತರ ದೂರುದಾರರು ಹಣ ಕೇಳಿದಾಗ ಹಣ ಮರಳಿ ನೀಡಲು ದಿನಾಂಕಃ **14.08.2023** ರಂದು ನಿನ್ನ ಖಾತೆಯ ಎಸ್ ಬಿ ಐ ಬ್ಯಾಂಕ ಶಾಖೆ ಸತೂರ ಧಾರವಾಡ ಚೆಕ್ ನಂ.**354632** ಮೊತ್ತ ರೂ.**7,82,000/-** ನಮೂದಿಸಿ ಪೋಲಿಸರ ಸಮಕ್ಷಮ ಚೆಕ್ಕನ್ನು ನೀಡಿದ್ದು ಅದನ್ನು ನಗದೀಕರಣಕ್ಕಾಗಿ ದಿನಾಂಕ **29.08.2023** ರಂದು ದೂರುದಾರರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆ ಶಿಗ್ಗಾಂವ ಇವರಲ್ಲಿ ಸಲ್ಲಿಸಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ (funds insufficient) ಅಂತಾ ಹೇಳಿ ಸದರ ಬ್ಯಾಂಕಿನವರು ಫಿರ್ಯಾದಿಗೆ ಚೆಕ್ಕನ್ನು ದಿಃ **05.09.2023** ರಂದು ಮರಳಿ ನೀಡಿದ್ದು, ದೂರುದಾರರು ದಿನಾಂಕ **06.09.2023** ರಂದು ತನ್ನ ವಕೀಲರ ಮುಖಾಂತರ ನಿಮಗೆ ನೋಟೀಸು ನೀಡಿದ್ದರೂ ಸಹ ಚೆಕ್ ಹಣವನ್ನು ನೀವು ಇಂದಿನವರೆಗೂ ಮರಳಿ ಕೊಟ್ಟಿರುವುದಿಲ್ಲಾ. ಆ ಮೂಲಕ ವರ್ಗಾವಣೆ ಲಿಖಿತಗಳ ಅಧಿನಿಯಮ **1881** ಕಲಂ **138** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಗುನ್ಹೆ ಎಸಗಿರುತ್ತೀ ಅಂತಾ ಆಪಾದಿಸಲಾಗಿದೆ.

ಮೇಲ್ಕಂಡ ಅಪರಾಧಗಳು ನನ್ನ ಕಾರ್ಯ ಕಕ್ಷೆಯಲ್ಲಿ ಎಸಗಿರುವುದರಿಂದ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತೇನೆ.

## ಆಪಾದನೆ

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?
ಉತ್ತರಃ-

ಪ್ರಃ-2) ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?
ಉತ್ತರಃ-

(ಆರೋಪಣೆಯನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವನ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ದಿನಾಂಕ 16-12-2024

(ಸುನಿಲ ಶಾ. ತಳವಾರ)
ಹಿರಿಯ ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.ಗಳು
ಶಿಗ್ಗಾಂವ.